ಕೆ.ಜಿ.ಯಷ್ಟು ಹೆಚ್ಚಿನ ಪ್ರಮಾಣದ ಸಮತೋಲನ ಪಶು ಆಹಾರವನ್ನು ನೀಡಬೇಕಾಗುತ್ತದೆ.



**ಹಾಲು ಕರೆಯುವ ಹಸುಗಳು**

ಹಾಲು ಕೊಡುವ ರಾಸುಗಳಿಗೆ ಶಕ್ತಿಯು ಪ್ರಮುಖವಾಗಿ ಅವುಗಳ ದೇಹದ ರಕ್ಷಣೆಗಾಗಿ ಮತ್ತು ಉತ್ಪಾದನೆಗೆ ಬೇಕಾಗುತ್ತದೆ. ಹಾಗಾಗಿ ಪಶು ಆಹಾರವನ್ನು ಹಾಲಿನ ಉತ್ಪಾದನೆಗಷ್ಟೇ ಅಲ್ಲದೇ, ರಾಸುಗಳ ದೇಹ ರಕ್ಷನೇಗೂ ಸಹ ನೀಡಬೇಕಾಗುತ್ತದೆ.

ಪ್ರತಿ ದಿನ 1.5 ಕೆ.ಜಿ.ಯಷ್ಟೆ ಸಮತೋಲನ ಪಶು ಆಹಾರವನ್ನು ರಾಸುಗಳ ದೇಹ ರಕ್ಷಣೆಗಾಗಿ ಕೊಡಬೇಕು ಮತ್ತು ಪ್ರತಿ 3 ಲೀಟರ್ ಹಾಲಿಗೆ 1 ಕೆ.ಜಿ.ಯಷ್ಟೆ ಪಶು ಆಹಾರವನ್ನು ಕೊಡಬೇಕಾಗುತ್ತದೆ.



ಹಸುಗಳು ಹಾಲು ಕೊಡುತ್ತಿದ್ದರೆ, 7ನೇ ತಿಂಗಳ ಗರ್ಭಾವಸ್ಥೆಯ ನಂತರ ಹಾಲು ಹಿಂಡುವುದನ್ನು ನಿಲ್ಲಿಸಬೇಕು ಮತ್ತು ಹಿಂದೆ ತಿಳಿಸಿದಂತೆ ಭ್ರೂಣ ಬೆಳವಣಿಗೆಗೆ 2 ರಿಂದ 2.5 ಕೆ.ಜಿ ಯಷ್ಟು ಹೆಚ್ಚಿನ ಸಮತೋಲನ ಪಶು ಆಹಾರ ನೀಡಬೇಕು.



**ವಿಂಗಡಿಸಿ ನೀಡುವ ವಿಧಾನ ಎಂದರೇನು ?**

ಒಟ್ಟು ನೀಡಬೇಕಾದ ಸಮತೋಲನ ಪಶು ಆಹಾರವನ್ನು ವಿವಿಧ ಭಾಗಗಳಾಗಿ ವಿಂಗಡಿಸಿ, ದಿನದ ಬೇರೆ ಬೇರೆ ಸಮಯದಲ್ಲಿ (ಬೆಳಿಗ್ಗೆ, ಮದ್ಯಾಹ್ನ, ಸಾಯಂಕಾಲ ಮತ್ತು ರಾತ್ರಿಗಳಲ್ಲಿ) ತಿನ್ನಿಸುವುದು. ಯಾವುದೇ ರಾಸುಗಳಿಗೆ ಒಂದು ದಿನಕ್ಕೆ 5 ಕೆ.ಜಿ.ಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಮತೋಲನ ಪಶು ಆಹಾರವನ್ನು ನೀಡಬೇಕಾದ ಸಂದರ್ಭದಲ್ಲಿ ಇಂತಹ ವಿಧಾನವನ್ನು ಉಪಯೋಗಿಸುತ್ತಾರೆ. ಇದರಿಂದ ರಾಸುಗಳಲ್ಲಿ ಜೀರ್ಣಶಕ್ತಿಯು ಅಧಿಕವಾಗುತ್ತದೆ ಅಲ್ಲದೇ ಪಶು ಆಹಾರ ನಷ್ಟವಾಗುವುದನ್ನು ತಡೆಗಟ್ಟಬಹುದು.


**------: ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :------**

**ಐ.ಸಿ.ಎ.ಆರ್.ಕೃಷಿ ವಿಜ್ಞಾನ ಕೇಂದ್ರ, ಸ್ಟೇಷನ್ ರಸ್ತೆ, ಇಂಡಿ**

**ದೂರವಾಣಿ: (08359) 22566**



**ಕೃಷಿ ವಿಶ್ವವಿದ್ಯಾಲಯ, ಧಾರವಾಡ**

**ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ**

**ಇಂಡಿ–586 209**


# ಹೈನು ರಾಸುಗಳಿಗೆ ಸ್ಥಳೀಯ ಪಶುಆಹಾರ ತಯಾರಿಕೆ

## ವಿಸ್ತರಣಾ ಹಸ್ತ ಪತ್ರಿಕೆ–12

**2018–19**




**ಲೇಖಕರು:**

**ಡಾ. ಸಂತೋಷ ಶಿಂಧೆ, ಡಾ. ಆರ್.ಬಿ. ನೆಗಳೂರ**

**ಡಾ. ಸವಿತಾ, ಬಿ., ಡಾ. ರವಿ, ವೈ**

**ಡಾ. ಸೈಯದ ಸಮೀನ ಅಂಜುಮ್, ಶ್ರೀಮತಿ ಹೀನಾ. ಎಮ್.ಎಸ್**

**ಕು. ಚೈತ್ರಾ, ಕು. ಗೀತಾ**

ಸಂಪಾದಕರು

**ಡಾ. ಆರ್. ಬಿ. ನೆಗಳೂರ**

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ಕೃಷಿ ವಿಜ್ಞಾನ ಕೇಂದ್ರ, ಇಂಡಿ

ಪ್ರಕಾಶಕರು

**ಡಾ. ಎಸ್.ಬಿ. ಕಲಘಟಗಿ**

ಸಹ ವಿಸ್ತರಣಾ ನಿರ್ದೇಶಕರು

ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ

## ಹೈನು ರಾಸುಗಳಿಗೆ ಸ್ಥಳೀಯ ಪಶುಆಹಾರ ತಯಾರಿಕೆ

ಪಶುಪಾಲನೆಯ ಒಟ್ಟು ವೆಚ್ಚದಲ್ಲಿ ಶೇಕಡಾ 60–70 ರಷ್ಟು ಖರ್ಚು ಆಹಾರದ್ದಾಗಿರುತ್ತದೆ. ಇದರಲ್ಲಿ ದಾಣಿ ಮಿಶ್ರಣದ ಖರೀದಿಯ ಖರ್ಚೆ ಅಧಿಕವಾಗಿರುತ್ತದೆ. ರಾಸುಗಳಿಗೆ ಅಗತ್ಯವಿರುವ ಶರ್ಕರಪಿಷ್ಠ, ಪ್ರೋಟೀನುಗಳು, ಕೊಬ್ಬು (ಮೇದಸ್ಸು) ಮತ್ತು ಖನಿಜಗಳನ್ನು ಸರಿಯಾದ ಪ್ರಮಾಣದಲ್ಲಿ ಒಳಗೊಂಡ ಮಿಶ್ರಣಕ್ಕೆ ಸಮತೋಲನ ಪಶು ಆಹಾರ ಅಥವಾ ಪೌಷ್ಠಿಕ ಆಹಾರ ಎಂದು ಕರೆಯುತ್ತೇವೆ. ದಾಣಿ ಮಿಶ್ರಣ ತಯಾರಿಗೆ ಬೇಕಾಗುವ ಪದಾರ್ಥಗಳು ರೈತರ ಬಳಿಯೇ ಬಹುಪಾಲು ಇರುತ್ತವೆ. ಅವುಗಳ ಜೊತೆಗೆ ಕೆಲವೊಂದು ಹಿಂಡಿ, ಖನಿಜ ಮಿಶ್ರಣ ಪುಡಿ, ಸೇರಿಸಿದರೆ ಮನೆಯಲ್ಲಿಯೇ ಉತ್ತಮವಾದ ಕಡಿಮೆ ಖರ್ಚಿನ ಪಶು ಆಹಾರ ತಯಾರಿಸಿಕೊಳ್ಳಬಹುದು.

### ಪಶು ಆಹಾರ ಮಿಶ್ರಣ ತಯಾರಿಯಲ್ಲಿ ಬಳಸುವ ವಿವಿಧ ಪದಾರ್ಥಗಳ ಪ್ರಮಾಣ

ನಮಗೆ ಬೇಕಾಗುವ ಬಹುಮುಖ್ಯ ಪದಾರ್ಥಗಳು ದಿನನಿತ್ಯ ಉಪಯೋಗಿಸುವ ಮುಸಿಕಿನ ಜೋಳ, ಬೂಸ, ಕಾಳುಗಳಲ್ಲಿ ಇರುತ್ತವೆ. ಬಹಳ ಜನರು ಇವೆಲ್ಲವುಗಳನ್ನು ಹೈನು ರಾಸುಗಳಿಗೆ ನೀಡುತ್ತಾರೆ. ಆದರೆ ಸರಿಯಾದ ಪ್ರಮಾಣದಲ್ಲಿ ನೀಡದೇ ಇರುವುದರಿಂದ ರಾಸುಗಳ ಆರೋಗ್ಯ ಮತ್ತು ಹಾಲಿನ ಉತ್ಪಾದನೆ ಏರು–ಪೇರಾಗುತ್ತದೆ. ಆದ್ದರಿಂದ ಇದೇ ಪದಾರ್ಥಗಳನ್ನು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸಿ, ತಯಾರಿಸಿದ ಸಮತೋಲನ ಪಶು ಆಹಾರ ಬಳಸುವುದು ಅತೀ ಮುಖ್ಯ. ಇದನ್ನು ತಯಾರಿಸುವ ಸೂತ್ರಗಳನ್ನು ನುರಿತ ಪಶು ಆಹಾರ ತಜ್ಞರಿಂದ ಪಡೆಯುವುದು ಒಳ್ಳೆಯದು.

### ಪಶು ಆಹಾರ ಮಿಶ್ರಣದಲ್ಲಿ ಬಳಸುವ ಮುಖ್ಯ ಪದಾರ್ಥಗಳು

| | | |
|---|---|---|
| ಕಾಳಿನ ನುಚ್ಚು | – | ಜೋಳ, ಮೆಕ್ಕೆ ಜೋಳ, ಸಜ್ಜೆ, ರಾಗಿ, ಗೋದಿ, ಹುರುಳಿ ಇತ್ಯಾದಿ |
| ದವಸ ಧಾನ್ಯಗಳ ಉಪಪದಾರ್ಥಗಳು | – | ಗೋದಿ ತೌಡು, ಅಕ್ಕಿ ತೌಡು, ಬೇಳೆ ಕಾಳುಗಳ ಹೊಟ್ಟು, ಇತ್ಯಾದಿ |
| ಹಿಂಡಿಗಳು | – | ಶೇಂಗಾ, ಸೂರ್ಯಕಾಂತಿ, ಹತ್ತಿಕಾಳು, ಸೋಯಾಬೀನ್ ಹಿಂಡಿ ಇತ್ಯಾದಿ |
| ಲವಣಾಂಶ ಮತ್ತು ಅನ್ನಾಂಗಗಳು | – | ಲವಣ ಮಿಶ್ರಣ, ಸುಣ್ಣ, ಉಪ್ಪು, ಮೂಳೆ ಪುಡಿ, ಅನ್ನಾಂಗ ಎ, ಡಿ & ಇ. |

100 ಕಿ.ಗ್ರಾಂ. ಪಶು ಆಹಾರ ಮಿಶ್ರಣ ತಯಾರಿಸಬೇಕಿದ್ದರೆ ಕೆಳಗೆ ಸೂಚಿಸಿದ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಪುಡಿ ಮಾಡಿಸಿ ಮಿಶ್ರಣ ಮಾಡಬೇಕು.

| ಆಹಾರ ಪದಾರ್ಥಗಳು | ಬೆರೆಸುವ ಪ್ರಮಾಣ |
|---|---|
| ಕಾಳಿನ ನುಚ್ಚು | 40–50 ಕಿ.ಗ್ರಾಂ. |
| ಉಪಪದಾರ್ಥಗಳು | 30–40 ಕಿ.ಗ್ರಾಂ. |
| ಹಿಂಡಿಗಳು | 15–25 ಕಿ.ಗ್ರಾಂ. |
| ಲವಣಾಂಶದ ಮಿಶ್ರಣ | 2 ಕಿ.ಗ್ರಾಂ. |
| ಉಪ್ಪು | 1 ಕಿ.ಗ್ರಾಂ. |




### ಕೆಲವೊಂದು ಬದಲಾವಣೆಗಳನ್ನೂ ಮಾಡಬಹದು

- ಮೇಲಿನ ಮಿಶ್ರಣಕ್ಕೆ ಕಾಕಂಬಿ ದೊರೆಯುತ್ತಿದ್ದರೆ, 5–10 ಕಿ.ಗ್ರಾಂ.ನ್ನು 100 ಕಿ.ಗ್ರಾಂ. ಆಹಾರ ಮಿಶ್ರಣದಲ್ಲಿ ಮಿಶ್ರಣ ಮಾಡಬಹುದು.
- ಮೇಲಿನ ಮಿಶ್ರಣಕ್ಕೆ ಹಿಂಡಿಯ ಪ್ರಮಾಣವನ್ನು ಕಡಿಮೆ ಮಾಡಿ ಯೂರಿಯಾವನ್ನು ಒಂದು ಕಿ.ಗ್ರಾಂ.ವರೆಗೆ ಸೇರಿಸಬಹುದು. ಯೂರಿಯಾ ಬಳಸಿದಲ್ಲಿ ಆರು ತಿಂಗಳ ಮೇಲ್ಪಟ್ಟ ಕರುಗಳಿಗೆ / ಆಕಳುಗಾಗಿ ಮಾತ್ರ ಕೊಡಬೇಕು.
- ಸ್ಥಳೀಯವಾಗಿ ದೊರೆಯುವ ಅಸಾಂಪ್ರದಾಯಿಕ ಆಹಾರ ಪದಾರ್ಥಗಳನ್ನು (ಶೇಂಗಾ ಸಿಪ್ಪೆ, ಕಾಫಿ ಸಿಪ್ಪೆ, ಮಾವಿನ ಗೊಟ್ಟದ ಬಿಳಿಭಾಗ, ಜಾಲಿ ಗಿಡದ ಕಾಯಿ, ಹುಣಸೇ ಬೀಜ ಇತ್ಯಾದಿ) ತಜ್ಞರ ಸಲಹೆ ಮೇರೆಗೆ ಪ್ರತಿ 100 ಕಿ.ಗ್ರಾಂ. ಮಿಶ್ರಣಕ್ಕೆ 10–15 ಕಿ.ಗ್ರಾಂ.ವರೆಗೆ ಸೇರಿಸಬಹುದು.

### ವಿವಿಧ ವರ್ಗಗಳ ಹಸುಗಳಿಗೆ ಆಹಾರ ಮಿಶ್ರಣ ಕೊಡುವ ಪ್ರಮಾಣ

| ವರ್ಗ | ಪ್ರಮಾಣ |
|---|---|
| ದೇಹದ ನಿರ್ವಹಣೆಗೆ | 1.5 – 2.0 ಕಿ.ಗ್ರಾಂ. |
| ಹಾಲು ಉತ್ಪಾದನೆಗೆ (ಪ್ರತಿ ಒಂದು ಲೀಟರ್‌ಗೆ) | 0.40 ಕಿ.ಗ್ರಾಂ. |
| ಗರ್ಭ ಧರಿಸಿದ ಆಕಳಿಗೆ (ಕೊನೆಯ ಮೂರು ತಿಂಗಳು) ಹೆಚ್ಚುವರಿಯಾಗಿ | 1.5–2.0 ಕಿ.ಗ್ರಾಂ. |
| ಕರುಗಳಿಗೆ (ಉತ್ತಮ ಬೆಳವಣಿಗೆಗಾಗಿ) | ದೇಹ ತೂಕದ ಶೇ. ಒಂದರಷ್ಟು |

### ಪಡ್ಡೆಗಳಿಗೆ ಸಮತೋಲನ ಪಶು ಆಹಾರ

ಆಧುನಿಕ ತಳಿ ಅಭಿವೃದ್ಧಿಯಿಂದಾಗಿ ಇಂದು ನಮ್ಮಲ್ಲಿ ಲಭ್ಯವಿರುವ ತಳಿಗಳು 6ನೇ ತಿಂಗಳಿನಿಂದ 14 ತಿಂಗಳೊಳಗೆ ದಿನಕ್ಕೆ 400 ಗ್ರಾಂ ನಂತೆ ಬೆಳೆಯುವ ಸಾಮರ್ಥ್ಯ ಹೊಂದಿವೆ. ಇಂತಹ ಅಧಿಕ ಬೆಳವಣಿಗೆಗೆ ಉತ್ತಮವಾದ ಹಸಿರು ಹುಲ್ಲು ಮತ್ತು ಸರಿಯಾದ ಪ್ರಮಾಣದ ಸಮತೋಲನ ಪಶು ಆಹಾರವನ್ನು ನೀಡಬೇಕಾಗುತ್ತದೆ.

ಈ ರೀತಿಯ ಉತ್ತಮ ಬೆಳವಣಿಗೆಗೆ 6 ರಿಂದ 8 ತಿಂಗಳ ವಯಸ್ಸಿನ ಪಡ್ಡೆಗಳಿಗೆ ಪ್ರತಿದಿನ 1 ಕೆ.ಜಿ ಯಿಂದ 1.5 ಕೆ.ಜಿ.ಯಷ್ಟು ಹಾಗೂ 8 ರಿಂದ 14 ತಿಂಗಳ ಪಡ್ಡೆಗಳಿಗೆ 1.5 ಕೆ.ಜಿ ಯಿಂದ 2.5 ಕೆ.ಜಿ.ಯಷ್ಟು ಸಮತೋಲನ ಪಶು ಆಹಾರವನ್ನು ನೀಡುವುದರಿಂದ ಹಸುಗಳನ್ನು 12–15 ನೇ ತಿಂಗಳಲ್ಲಿ ಕೃತಕ ಗರ್ಭಧಾರಣೆ ಮಾಡಿಸಬಹುದು.

### ಗರ್ಭಧರಿಸಿದ ಹಸುಗಳು

ಏಳು, ಎಂಟು ಮತ್ತು ಒಂಭತ್ತನೇ ತಿಂಗಳ ಗರ್ಭಾವಸ್ಥೆಯಲ್ಲಿ ಭ್ರೂಣ (ಕರುವಿನ) ದ ಬೆಳವಣಿಗೆ ಉಳಿದ 6 ತಿಂಗಳ ಬೆಳವಣಿಗೆಗಿಂತ ಅಧಿಕವಾಗಿರುತ್ತದೆ. ಹಾಗೆಯೇ, ತಾಯಿಯ ಗರ್ಭವೂ ಕೂಡ ಬೆಳೆಯಬೇಕಾಗುತ್ತದೆ ಮತ್ತು ಕೆಚ್ಚಲಿನ ಬೆಳವಣಿಗೆಯೂ ಸಹ ಉತ್ತಮವಾಗಿರುತ್ತದೆ. ಆದುದರಿಂದ ಗರ್ಭದ ರಾಸುಗಳಿಗೆ ಕೊನೆಯ ಮೂರು ತಿಂಗಳಲ್ಲಿ ಪೌಷ್ಠಿಕಾಂಶಗಳ ಅಗತ್ಯತೆ ಹೆಚ್ಚಾಗಿರುತ್ತದೆ. ಹೀಗಾಗಿ ಅಂತಹ ಸಮಯದಲ್ಲಿ ಪ್ರತಿದಿನ 2 ಕೆ.ಜಿ.ಯಿಂದ 2.5